ಪಿಲಿಕುಳ ಅಭಿವೃದ್ದಿ ಪ್ರಾಧಿಕಾರ, ಮಂಗಳೂರು

# **ಕನ್ನಡ ರಾಜ್ಯೋತ್ಸವ ಆಚರಣೆ** ಮತ್ತು
# **ಕನ್ನಡ ನಾಡುನುಡಿಯ ಗೀತಗಾಯನ ಕಾರ್ಯಕ್ರಮ**

## ವರದಿ

68ನೇ ಕನ್ನಡ ರಾಜ್ಯೋತ್ಸವವನ್ನು ದಿನಾಂಕ: 01-11-2023ರಂದು ಪಿಲಿಕುಳ ಅಭಿವೃದ್ದಿ ಪ್ರಾಧಿಕಾರದ ಆಯುಕ್ತರ ಕಛೇರಿಯ ಮುಂಭಾಗದಲ್ಲಿಆಚರಿಸಲಾಯಿತು. ಪಿಲಿಕುಳ ಅಭಿವೃದ್ದಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಪ್ರವೀಣ ಬಿ. ನಾಯಕ್ ಇವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು. ರಾಷ್ಟ್ರಗೀತೆ, ನಾಡಗೀತೆಯ ಬಳಿಕ ಕನ್ನಡಾಂಬೆಗೆ ಪುಷ್ಪನಮನ ಸಲ್ಲಿಸಲಾಯಿತು.

ಇದೇ ವೇಳೆ ಮೈಸೂರು ರಾಜ್ಯವು “ಕರ್ನಾಟಕ” ಎಂದು ಮರುನಾಮಕರಣಗೊಂಡು ನವೆಂಬರ್ 1, 2023ಕ್ಕೆ 50 ವರ್ಷ ಪೂರೈಸಿದ ಶುಭ ಸಂದರ್ಭದಲ್ಲಿ ಸರಕಾರದ ಆಶಯದಂತೆ, ಪಿಲಿಕುಳ ಅಭಿವೃದ್ದಿ ಪ್ರಾಧಿಕಾರದಲ್ಲಿ ನಾಡಿನ ಹೆಸರಾಂತ ಕವಿಗಳು ರಚಿಸಿದ ಕನ್ನಡ ಗೀತೆಗಳ ಗೀತಗಾಯನದ ಮೂಲಕ ಕನ್ನಡಾಂಬೆಗೆ ನುಡಿನಮನ ಸಲ್ಲಿಸಲಾಯಿತು. ಹುಯಿಲಗೋಳ ನಾರಾಯಣರಾಯರು ರಚಿಸಿದ **ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು,** ಕುವೆಂಪುರವರು ಬರೆದಿರುವ **ಎಲ್ಲಾದರೂ ಇರು ಎಂತಾದರೂ ಇರು,** ದ.ರಾ.ಬೇಂದ್ರೆಯವರ **ಒಂದೇ ಒಂದೇ ಕರ್ನಾಟಕ ಒಂದೇ**, ಸಿದ್ದಯ್ಯ ಪುರಾಣಿಕರು ರಚಿಸಿದ **ಹೊತ್ತಿತೋ ಹೊತ್ತಿತೋ ಕನ್ನಡದ ದೀಪ** ಹಾಗೂ ಚನ್ನವೀರ ಕಣವಿಯವರ **ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ** ಎನ್ನುವ ಐದು ಕನ್ನಡ ಹಾಡುಗಳನ್ನು ಪಿಲಿಕುಳದ ಸಿಬ್ಬಂದಿಗಳು ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಪಿಲಿಕುಳ ಅಭಿವೃದ್ದಿ ಪ್ರಾಧಿಕಾರದ ಆಡಳಿತಾಧಿಕಾರಿ ಶ್ರೀ ಸುರೇಶ್ ಅಡಿಗ, ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ.ಕೆ.ವಿ.ರಾವ್, ಸಸ್ಯಶಾಸ್ತ್ರ ವಿಭಾಗದ ಪ್ರಧಾನ ವಿಜ್ಞಾನಿ ಡಾ.ಸೂರ್ಯಪ್ರಕಾಶ್ ಶೆಣೈ, ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ. ನಿತಿನ್ ಎನ್.ಕೆ., ಭದ್ರತಾಧಿಕಾರಿ ಶ್ರೀ ದಯಸಾಗರ್ ಹಾಗೂ ಪಿಲಿಕುಳದ ಇತರ ಸಿಬ್ಬಂದಿವರ್ಗದವರು ಹಾಜರಿದ್ದರು.

ವೈಜ್ಞಾನಿಕ ಅಧಿಕಾರಿ ಶ್ರೀ ರಾಮಕೃಷ್ಣ ಮರಾಟೆ ಕಾರ್ಯಕ್ರಮವನ್ನು ನಿರೂಪಿಸಿದರು.

ರಾಷ್ಟ್ರಧ್ವಜಾರೋಹಣ




ರಾಷ್ಟ್ರಧ್ವಜಾರೋಹಣ



ಕನ್ನಡಾಂಬೆಗೆ ಪುಷ್ಪಾರ್ಚನೆ




ಸಿಬ್ಬಂದಿಗಳಿಂದ ಕನ್ನಡ ಗೀತಗಾಯನ





ಕರಾವಳಿ ಸುದ್ದಿ ಸಮೃದ್ಧಿ

ವಿಜಯವಾಣಿ ಗುರುವಾರ 2 ನವೆಂಬರ್ 2023 » 2 NOVEMBER 2023

5A

## ಟಾಪ್ ನ್ಯೂಸ್ ಪಿಲಿಕುಳದಲ್ಲಿ ಆಚರಣೆ

ಗುರುಪುರ: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಆಯುಕ್ತರ ಕಚೇರಿಯ ಮುಂಭಾಗ ಬುಧವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಪ್ರಾಧಿಕಾರದ ಆಯುಕ್ತ ಪ್ರವೀಣ ಬಿ.ನಾಯಕ್ ಧ್ವಜಾರೋಹಣ ಮಾಡಿದರು. ರಾಷ್ಟ್ರಗೀತೆ, ನಾಡಗೀತೆ ಬಳಿಕ ಕನ್ನಡಾಂಬೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಪ್ರಾಧಿಕಾರದ ಆಡಳಿತಾಧಿಕಾರಿ ಸುರೇಶ್ ಅಡಿಗ, ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ದೇಶಕ ಡಾ. ಕೆ.ವಿ.ರಾವ್, ಸಸ್ಯಶಾಸ್ತ್ರ ವಿಭಾಗದ ಪ್ರಧಾನ ವಿಜ್ಞಾನಿ ಡಾ.ಸೂರ್ಯಪ್ರಕಾಶ ಶೆಣೈ, ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ.ನಿತಿನ್ ಎನ್.ಕೆ., ಭದ್ರತಾಧಿಕಾರಿ ದಯಾಸಾಗರ ಹಾಗೂ ಪಿಲಿಕುಳ ಇತರ ಸಿಬ್ಬಂದಿ ವರ್ಗದವರು ಇದ್ದರು. ವೈಜ್ಞಾನಿಕ ಅಧಿಕಾರಿ ರಾಮಕೃಷ್ಣ ಮರಾಟಿ ನಿರೂಪಿಸಿದರು.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಆಯುಕ್ತರ ಕಚೇರಿಯ ಮುಂಭಾಗ ಬುಧವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಪ್ರಾಧಿಕಾರದ ಆಯುಕ್ತ ಪ್ರವೀಣ ಬಿ.ನಾಯಕ್ ಧ್ವಜಾರೋಹಣ ಮಾಡಿದರು. ರಾಷ್ಟ್ರಗೀತೆ, ನಾಡಗೀತೆ ಬಳಿಕ ಕನ್ನಡಾಂಬೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಪ್ರಾಧಿಕಾರದ ಆಡಳಿತಾಧಿಕಾರಿ ಸುರೇಶ್ ಅಡಿಗ, ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ದೇಶಕ ಡಾ. ಕೆ.ವಿ.ರಾವ್, ಡಾ.ಸೂರ್ಯಪ್ರಕಾಶ ಶೆಣೈ ಹಾಜರಿದ್ದರು.

ನವೆಂಬರ್ 1 ಕನ್ನಡ ರಾಜ್ಯೋತ್ಸವ ಸಂಭ್ರಮ. ಕನ್ನಡ ತಾಯಿ ಭುವನೇಶ್ವರಿಯ ಆರಾಧನೆಯ ಸಂಭ್ರಮವನ್ನು ಕರಾವಳಿ ಭಾಗದಲ್ಲಿ ಬುಧವಾರ ಸಂಭ್ರಮದಿಂದ ಆಚರಿಸಲಾಯಿತು. ಸಾಧಕರಿಗೆ ಸನ್ಮಾನ, ಪ್ರಶಸ್ತಿ, ಗೌರವಾರ್ಪಣೆಗಳು ನಡೆದವು. ವಿದ್ಯಾರ್ಥಿಗಳಿಂದ, ಕಲಾತಂಡಗಳಿಂದ, ಕಲಾವಿದರಿಂದ ಪ್ರಸ್ತುತಪಡಿಸಲ್ಪಟ್ಟ ಕನ್ನಡ ತಾಯಿಯನ್ನು ಆರಾಧಿಸುವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶೇಷ ಮೆರುಗು ನೀಡಿದವು. ಹಲವು ಕಡೆ ಕನ್ನಡ ತಾಯಿ ಭುವನೇಶ್ವರಿಯ ಸ್ತಬ್ಧಚಿತ್ರ ಮೆರವಣಿಗೆ ನಡೆಯಿತು.

# ಭುವನೇಶ್ವರಿ ತಾಯಿಗೆ ಕನ್ನಡದ ಆರಾಧನೆ

## ನಾಡಿನ ಸಾಂಸ್ಕೃತಿಕ ಪರಂಪರೆ ಶ್ರೀಮಂತ

ವಳಚ್ಚಿಲ್ ಎಕ್ಸ್‌ಪರ್ಟ್ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಸ್ಥೆಯ ಮಾಹಿತಿ ತಂತ್ರಜ್ಞಾನ ನಿರ್ದೇಶಕ ಅಂಕುಶ್ ಎನ್.ನಾಯಕ್ ಪುಷ್ಪಾರ್ಚನೆ ಮಾಡಿದರು. ಪ್ರಾಂಶುಪಾಲ ಡಾ.ಎನ್.ಕೆ.ವಿಜಯನ್ ಕರಿಪ್ಪಾಲ್, ಗಣಿತಶಾಸ್ತ್ರ ಉಪನ್ಯಾಸಕ ಶ್ಯಾಮಪ್ರಸಾದ್ ಭಟ್, ಕನ್ನಡ ಉಪನ್ಯಾಸಕ ಡಾ.ಶ್ರೀಕೃಷ್ಣ ಭಟ್ ಇದ್ದರು.

ಮಂಗಳೂರು: ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆ ಅತ್ಯಂತ ಶ್ರೀಮಂತವಾಗಿದೆ ಎಂದು ಎಕ್ಸ್‌ಪರ್ಟ್ ಶಿಕ್ಷಣ ಸಂಸ್ಥೆಯ ಮಾಹಿತಿ ತಂತ್ರಜ್ಞಾನ ನಿರ್ದೇಶಕ ಅಂಕುಶ್ ಎನ್.ನಾಯಕ್ ಹೇಳಿದರು.

ವಳಚ್ಚಿಲ್ ಎಕ್ಸ್‌ಪರ್ಟ್ ಪದವಿಪೂರ್ವ ಕಾಲೇಜಿನಲ್ಲಿ ಬುಧವಾರ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

» ಅಂಕುಶ್ ಎನ್. ನಾಯಕ್ ಬಣ್ಣನೆ

ಕನ್ನಡ ನಾಡು ನುಡಿಯ ಬಗ್ಗೆ ನಾವು ಹೆಮ್ಮೆಪಡಬೇಕು. ವಿಶಾಲ ... ಇತ್ಯಾದಿ ಪ್ರಾದೇಶಿಕ ವ್ಯತ್ಯಾಸ ತೋರದೆ ನಾವು ಕನ್ನಡ ಮಾತೆಯ ಮಕ್ಕಳು ಎಂಬುದನ್ನು ಮರೆಯಬಾರದು ಎಂದರು. ಗಣಿತಶಾಸ್ತ್ರ ಉಪನ್ಯಾಸಕ ಶ್ಯಾಮಪ್ರಸಾದ್ ಭಟ್ ಮಾತನಾಡಿ, ರಾಜ್ಯದ ಉದ್ದಗಲಕ್ಕೂ ಕನ್ನಡ ಮತ್ತು ಕನ್ನಡಿಗರು ಹರಿದು ಹಂಚಿಹೋಗಿದ್ದಾಗ ಆಲೂರು ವೆಂಕಟರಾಯರು ಸಮಗ್ರ ಕನ್ನಡ ನಾಡನ್ನು ಕಟ್ಟಿ ಒಗ್ಗಟ್ಟಿನ ಮಂತ್ರ ಹೇಳಿದರು ಎಂದು ನೆನಪಿಸಿದರು.

ತಾಯಿ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ...

## ಸಮಾಜ ನಿರ್ಮಾಣಕ್ಕೆ ದುಡಿದವರ ಸ್ಮರಣೆ

ಸುರತ್ಕಲ್ ಅನುದಾನಿತ ವಿದ್ಯಾದಾಯಿನಿ ಪ್ರೌಢಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ ಪ್ರತಿಷ್ಠಾನದ ಸುಂದರ್ ಶೆಟ್ಟಿ, ಎನ್ಐಟಿಕೆ ಡೀನ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ.ಚಿತ್ತರಂಜನ್ ಹೆಗ್ಡೆ, ಶ್ರೀನಿವಾಸ್ ಕುಳಾಯಿ, ಸುಧಾಕರ ರಾವ್ ಪೇಜಾವರ ಮೊದಲಾದವರು ಹಾಜರಿದ್ದರು.

ಮಂಗಳೂರು: ಹಿಂದು ವಿದ್ಯಾದಾಯಿನಿ ಸಂಘದ ಆಡಳಿತಕ್ಕೊಳಪಟ್ಟ ಸುರತ್ಕಲ್‌ನ ಅನುದಾನಿತ ವಿದ್ಯಾದಾಯಿನಿ ಪ್ರೌಢಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಣೆ ಜರುಗಿತು.

ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ ಪ್ರತಿಷ್ಠಾನದ ಸುಂದರ್ ಶೆಟ್ಟಿ ಧ್ವಜಾರೋಹಣ ನೆರವೇರಿಸಿದರು. ನಮ್ಮ ಸಂಪದ್ಭರಿತ ನಾಡಿನ ಬೆಳವಣಿಗೆಯಲ್ಲಿ ಸಂಸ್ಕಾರಯುತ ಸಮಾಜ ನಿರ್ಮಾಣಕ್ಕೆ ದುಡಿದ ಮಹನೀಯರ ಸ್ಮರಣೆ ಅವಶ್ಯ. ವಿದ್ಯೆಯೊಂದಿಗೆ ವಿನಯತೆ ರೂಢಿಸಿಕೊಂಡು ಯಶಸ್ವಿ ನಾಗರಿಕರಾಗಬೇಕು ಎಂದು ಕಿವಿಮಾತು ಹೇಳಿದರು.

ಎನ್ಐಟಿಕೆಯ ಡೀನ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ.ಚಿತ್ತರಂಜನ್ ಹೆಗ್ಡೆ ಕರ್ನಾಟಕ, ಕನ್ನಡ ಭಾಷೆಯ ಮಹತ್ವದ ಬಗ್ಗೆ ಮಾತನಾಡಿ, ಕನ್ನಡ ಮಾಧ್ಯಮವನ್ನು ಕಡೆಗಣಿಸದೆ, ಸಂಸ್ಕೃತಿ ನಾಡು-ನುಡಿಯನ್ನು ಬೆಳೆಸಲು ...